|| ಕಂಡೆ ನಾ ಗೋವಿಂದನ ||

ಕಂಡೆ ನಾ ಗೋವಿಂದನ |
ಪುಂಡರೀಕಾಕ್ಷ ಪಾಂಡವ ಪಕ್ಷ ಕೃಷ್ಣನ || ಪ ||

ಕೇಶವ ನಾರಾಯಣ ಶ್ರೀಕೃಷ್ಣನ |
ವಾಸುದೇವ ಅಚ್ಯುತಾನಂತನ ||
ಸಾಸಿರ ನಾಮದ ಶ್ರೀ ಹೃಷೀಕೇಶನ |
ಶೇಷಶಯನ ನಮ್ಮ ವಾಸುದೇವ ಸುತನ || ೧ ||

ಮಾಧವ ಮಧುಸೂದನ ತ್ರಿವಿಕ್ರಮನ |
ಯಾದವಕುಲವಂದ್ಯನ ||
ವೇದಾಂತ ವೇದ್ಯನ ಇಂದಿರಾರಮಣನ |
ಆದಿ ಮೂರುತಿ ಪ್ರಹ್ಲಾದವರದನ || ೨ ||

ಪುರುಷೋತ್ತಮ ನರಹರಿ ಶ್ರೀ ಕೃಷ್ಣನ |
ಶರಣಾಗತ ರಕ್ಷಕನ ||
ಕರುಣಾಕರ ನಮ್ಮ ಪುರಂದರವಿಠಲನ |
ನೆರೆ ನಂಬಿದೆನು ಬೇಲೂರ ಚೆನ್ನಿಗನ || ೩ ||